# ಮರಣಕ್ಕಿಂತ ದೊಡ್ಡ ಕೂಗು ಯಾವುದಿದೆ?

◆ **ಕವಿತೆ ಬರೆಯುವ ಮುಂಚೆ ಅಥವಾ ಬರೆಯುವಾಗ ನಿಮ್ಮ ಮನಸ್ಥಿತಿ ಹೇಗಿರುತ್ತೆ? ಏನಾದರೂ ಪೂರ್ವ ತಯಾರಿ ಇರುತ್ತಾ?**

ಕಾವ್ಯವೆಂದರೆ ತಪಸ್ಸು. ನನ್ನ ಅಂತರಂಗದ ನಾಡಿಮಿಡಿತವನ್ನು ಅನುಭವಿಸಿದಾಗಲೆಲ್ಲ ಕಾವ್ಯಕ್ಕೆ ಶರಣಾಗುತ್ತೇನೆ. ಮಹಿಳೆಯಾಗಿ ನಾನು ಜೀವನದ ಸಣ್ಣ ಸಣ್ಣ ಖುಷಿಯ ಕ್ಷಣಗಳನ್ನು ಪ್ರೀತಿಸುತ್ತೇನೆ. ಮನುಷ್ಯ ತಲ್ಲಣಗಳು ಕೇವಲ ಮನಸ್ಸು ಅಥವಾ ಆತ್ಮದಂತಹದೇನೋ ಒಳಗೊಂಡಿವೆ. ನಾನು ಧ್ಯಾನಕ್ಕೆ ಹತ್ತಿರವೆನಿಸುವ ಕ್ಷಣಗಳಲ್ಲಿ ಮಾತ್ರ ಕವಿತೆಗಳನ್ನು ಬರೆಯಲು ಸಾಧ್ಯವಾಗಿದೆ.

◆ **ಕವಿತೆ ಅಲ್ಲದಿದ್ರೆ ಬೇರೇನು ಮಾಡಲು ಇಷ್ಟ ಪಡ್ತಿದ್ರಿ?**

ಪ್ರವಾಸ ನನಗಿಷ್ಟ. ಬದುಕು ನನಗಾಗಿ ನೀಡಿದ ನೋವಿನಿಂದ ತಪ್ಪಿಸಿಕೊಳ್ಳಲು ನಿರಂತರವಾಗಿ ಪಯಣಿಸುತ್ತಲೇ ಇರುತ್ತೇನೆ. ನನ್ನಾತ್ಮ ಆ ನೋವಿನೊಂದಿಗೆ ಸೇರಿ ಮುಳುಗುವ ಕಡೆಯ ಹಂತದವರೆಗೂ ನಾನು ಸಂಚರಿಸುತ್ತಲೇ ಇರುತ್ತೇನೆ.

◆ **ನಿಮ್ಮನ್ನು ಸದಾ ಕಾಡುವ ಕವಿತೆಯ ಸಾಲು ಯಾವುದು?**

For in silence, there I find no rejection or Acceptation

◆ **ನೀವು ಇಷ್ಟ ಪಡದೇ ಇರುವ ನಿಮ್ಮ ವ್ಯಕ್ತಿತ್ವದ ಗುಣ ಯಾವುದು ಅನ್ಸುತ್ತೆ?**

ನಾನೊಂದು ರೀತಿ ಅಳುಮುಂಜಿ. ನನ್ನಲ್ಲಿ ಹೊಗೆಯಂತೆ ಏಳುವ ಅಳುವನ್ನು ನಾನು ದ್ವೇಷಿಸುತ್ತೇನೆ. ನನ್ನೊಳಗೆ ತಾನೇ ತಾನಾಗಿ ಹುಟ್ಟಿಕೊಳ್ಳುವ ಆ ಮೂಕ ಅಳು ಹೊತ್ತಿಸುವ ಕಾರ್ಗತ್ತಲು ನನ್ನನ್ನು ಸದಾ ಬಲವಂತದ ಒತ್ತಡಕ್ಕೆ ದೂಡುತ್ತದೆಂದು ನನಗನಿಸುತ್ತೆ. ಅಜ್ಞಾನವು ನನ್ನ ಮೇಲೆ ಹೇರುವ ಭಾರಕ್ಕೆ ನಾನು ಸದಾ ಒಂದು ಬೆಳಕಿನ ಆಲೋಚನೆಯನ್ನು ಹೊಂದುವುದು ಅನಿವಾರ್ಯವಾಗಿದೆ.

◆ **ಮನುಷ್ಯ ಸಂಬಂಧಗಳಲ್ಲಿ ನಿಮಗೆ ಅಚ್ಚರಿ ಮೂಡಿಸುವ ಗುಣ-ಅವಗುಣಗಳೇನು?**

ಕೆಲವರ ಬಾಯಿಂದ ಹೊರಹೊಮ್ಮಿದಾಗ ಮಾತ್ರ ಅನುಭವಕ್ಕೆ ದಕ್ಕುವ, ಅರ್ಥ ಹೊರಡಿಸುವ ಪ್ರೀತಿಯ ಶಬ್ದಗಳು ನನ್ನನ್ನು ಯಾವಾಗಲೂ ಜೀವಂತವಾಗಿರಿಸುತ್ತವೆ. ನದಿಯ ದಡದಲ್ಲಿ ನಿಂತಿರುವ ಮರದಂತೆ, ನನಗೆ ವಿನೋದವಿಲ್ಲ ವಿಷಾದವಿಲ್ಲ. ನಿಮಗೆ ಗೊತ್ತಿಲ್ಲದೆಯೇ ನನ್ನ ಬೇರುಗಳು ನದಿಯಲ್ಲಿ ಆಳವಾಗಿ ಬೇರು ಬಿಟ್ಟಿವೆ. ಹತ್ತಿರ ಬಂದರೆ ನಿಮ್ಮೊಳಗೂ ಇಳಿದು ಬಿಡುತ್ತವೆ. ನೀರಿನ ಸೆಲೆ ಹುಡುಕುತ್ತಾ ನದಿಯ ಒಳಗೂ ಬೆಳೆಯುವ ಆ ಇನ್ನೊಂದು ಮರದಂತೆ, ಕೇವಲ ಹೊರಗಿನಿಂದ ಪ್ರೀತಿಯನ್ನು ನೋಡುವ ಜಾಯಮಾನ ನನ್ನದಲ್ಲ.

◆ **'ಇದು ನನ್ನ ಬದುಕು ಬದಲಿಸಿತು' ಅನ್ನೋ ಥರದ ಘಟನೆ ಏನಾದರೂ ನಿಮ್ಮ ಜೀವನದಲ್ಲಿ ನಡೆದಿದೆಯಾ? ಹಾಗಾದ್ರೆ ಅದು ಏನು?**

ಬದುಕಿನ ಮಸುಕು ಪರದೆಯನ್ನು ಸರಿಸಿ, ಪುನಃ ಬದುಕಿನಲ್ಲಿ ಆಸಕ್ತಿ ಮೂಡಿಸಿಕೊಳ್ಳಲು ನನಗೆ ಸಾಧ್ಯವಾದದ್ದು ನನ್ನ ಮಗಳು ಹುಟ್ಟಿದಾಗ. ನನ್ನ ಮಗಳ ಜನನವನ್ನು ನನ್ನ ಜೀವನದ ಹಾದಿಯನ್ನು ಗುರುತಿಸಿದ ಪ್ರಮುಖ ಘಟನೆಯಾಗಿ ನಾನು ನೋಡುತ್ತೇನೆ.